# ನರೇಂದ್ರಪುರ ರಾಮಕೃಷ್ಣ ಮಿಷನ್ ಆಶ್ರಮ

ಕೆ.ಆರ್. ಮೋಹನ್

ರಾಮಕೃಷ್ಣ ಮಿಷನ್ನಿನ ಅತಿದೊಡ್ಡ ಶೈಕ್ಷಣಿಕ ಕೇಂದ್ರಗಳಲ್ಲಿ ಒಂದಾದ ನರೇಂದ್ರಪುರ ಆಶ್ರಮದ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಟ್ಟಿರುವ ಲೇಖಕರು ನಿವೃತ್ತ ಬ್ಯಾಂಕ್ ಅಧಿಕಾರಿಗಳು. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರಾಗಿರುವ ಇವರ ಲೇಖನಗಳು ವಿವೇಕಪ್ರಭ ಪತ್ರಿಕೆಯಲ್ಲಿ ನಿಯಮಿತವಾಗಿ ಪ್ರಕಟವಾಗುತ್ತಲಿವೆ.



ನನ್ನ ಸೇವಾವಧಿಯಲ್ಲಿ, ೧೯೬೬–೧೯೮೮ ನೇ ಇಸವಿಯಲ್ಲಿ, ಕೊಲ್ಕತಾದಲ್ಲಿ ಕೆಲಸ ಮಾಡುವ ಸುಕೃತ ದೊರೆಯಿತು. ಇದರಿಂದ ಮೇಲಿಂದ ಮೇಲೆ ಬೇಲೂರು ಮಠ, ಉದ್ಬೋಧನ ಹಾಗೂ ದಕ್ಷಿಣೇಶ್ವರ ಪಾವನ ಕ್ಷೇತ್ರಗಳಿಗೆ ಹೋಗಲು ಅವಕಾಶವಾಗುತ್ತಿತ್ತು. ಇದರ ಜೊತೆಗೆ, ಆಶ್ರಮದ ಒಬ್ಬ ಸ್ವಾಮೀಜಿಯವರ ಪರಿಚಯವಾಗಿ, ನರೇಂದ್ರಪುರ ಆಶ್ರಮಕ್ಕೂ ಆಗಾಗ ಹೋಗುತ್ತಿದ್ದೆ. ಬಾಕಿ ಎಲ್ಲಾ ಆಶ್ರಮಗಳಿಗಿಂತ ಇದು ವಿಭಿನ್ನವಾಗಿದೆ. ಏಕೆಂದರೆ, ಸ್ವಾಮಿ ವಿವೇಕಾನಂದರ ಕನಸುಗಳನ್ನು ಕಾರ್ಯಗತ ಮಾಡುವ ಸಫಲ ಪ್ರಯತ್ನಗಳು ಇಲ್ಲಿ ನಡೆಯುತ್ತಿದೆ. ಇಲ್ಲಿ ಶಿಕ್ಷಣ ಮತ್ತು ಪ್ರಶಿಕ್ಷಣಕ್ಕೆ ಪ್ರಾಮುಖ್ಯತೆ. ನನ್ನ ಮಟ್ಟಿಗೆ ನರೇಂದ್ರಪುರ ಆಶ್ರಮ ೨೦ನೇ ಶತಮಾನದ ಆಧುನಿಕ ದೇಗುಲ.

**ಹಿನ್ನೆಲೆ :** ೧೯೪೩ರಲ್ಲಿ ಬಂಗಾಳದಲ್ಲಿ ಭೀಕರ ಬರಗಾಲ ಬಂದು, ಜನರು ಕಂಗಾಲಾಗಿದ್ದರು. ಅವರಿಗೆ ಸಾಂತ್ವನ ಮತ್ತು ಭರವಸೆ ಕೊಡಲು ಕೊಲ್ಕತಾದ ಉತ್ತರ ಭಾಗದಲ್ಲಿರುವ ಪಾಥೂರಿಯಾ ಘಾಟ್ ಎಂಬ ಪ್ರದೇಶದಲ್ಲಿ ರಾಮಕೃಷ್ಣ ಮಿಷನ್ ಆಶ್ರಮ ಪ್ರಾರಂಭವಾಯಿತು. ಮೊದಲು ಬಡ ಮತ್ತು ಅನಾಥ ಬಾಲಕರಿಗೆ ವಸತಿಸೌಕರ್ಯವನ್ನು ಒದಗಿಸಲಾಯಿತು. ಆಮೇಲೆ ಕೈಗೊಂಡ ರಚನಾತ್ಮಕ ಚಟುವಟಿಕೆಗಳಿಗೆ ಸ್ಥಳ ಸಾಲದೆ, ಕೊಲ್ಕತ್ತದಿಂದ ೧೬ ಕಿ.ಮೀ. ದಕ್ಷಿಣ ದಿಕ್ಕಿನಲ್ಲಿರುವ ಘಾರಿಯಾ ಎಂಬ ವಿಶಾಲ ಪ್ರದೇಶಕ್ಕೆ ೧೯೫೭ ರಲ್ಲಿ ಆಶ್ರಮವನ್ನೂ ಸ್ಥಳಾಂತರಿಸಿ. ಆ ಪ್ರದೇಶವನ್ನು 'ನರೇಂದ್ರಪುರ' ಎಂದು ನಾಮಕರಣ ಮಾಡಲಾಯಿತು.

**ಆಶ್ರಮದ ಅಂಗ ಸಂಸ್ಥೆಗಳು : ರಾಮಕೃಷ್ಣ ಮಿಷನ್ ವಿದ್ಯಾಲಯ** : ಈ ವಸತಿಶಾಲೆಯು ತಾರೀಖು ೨೨-೦೪-೧೯೫೮ರಂದು ಸ್ಥಾಪನೆಯಾಯಿತು. ಇಲ್ಲಿ ಬಂಗಾಳಿ ಮತ್ತು ಇಂಗ್ಲೀಷ್ ಮಾಧ್ಯಮಗಳ ಮೂಲಕ ಪ್ರೌಢಶಿಕ್ಷಣ (Higher Secondary) ಮತ್ತು ಪದವಿಪೂರ್ವ (+ ೨) ಶಿಕ್ಷಣವನ್ನು ನೀಡಲಾಗುತ್ತಿದೆ. ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಬಡ, ಶೋಷಿತ, ವಿಕಲಾಂಗ ಹಾಗೂ ನಿಮ್ನ ವರ್ಗದವರಿಗೆ ಆದ್ಯತೆ. ಇಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಸುಮಾರು ೧,೫೦೦. ಕಳೆದ ೧೦ ವರ್ಷಗಳಲ್ಲಿ ಪಶ್ಚಿಮ ಬಂಗಾಳ ಸರಕಾರ ನಡೆಸುವ ಪಬ್ಲಿಕ್ ಪರೀಕ್ಷೆಯಲ್ಲಿ, ಶೇಕಡ ನೂರಕ್ಕೆ ನೂರು ವಿದ್ಯಾರ್ಥಿಗಳು ಉತ್ತಮ ಮಟ್ಟದಲ್ಲಿ (Distinction) ಉತ್ತೀರ್ಣರಾಗಿದ್ದಾರೆ.



**ರಾಮಕೃಷ್ಣ ಮಿಷನ್ ರೆಸಿಡೆನ್ಷಿಯಲ್ ಕಾಲೇಜು :** ಹೆಸರೇ ಸೂಚಿಸುವಂತೆ ಇದು ಕೂಡ ವಸತಿ ವಿದ್ಯಾಲಯ. ಇದು ೧೯೬೦ರಲ್ಲಿ ಸ್ಥಾಪನೆಯಾಯಿತು. ಇಂಗ್ಲಿಷ್ ಮಾಧ್ಯಮದ ಮೂಲಕ ಪದವಿ ಮತ್ತು ಸ್ನಾತಕೋತ್ತರ ಪದವಿ ಶಿಕ್ಷಣಗಳ ವ್ಯವಸ್ಥೆ ಇಲ್ಲಿದೆ. ಸುಮಾರು ೩೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿನ ಫಲಿತಾಂಶಗಳು ಕೂಡ ಶೇಕಡ ನೂರಕ್ಕೆ ನೂರು.

**ಸಮಗ್ರ ಗ್ರಾಮೀಣ ಅಭಿವೃದ್ಧಿ ಮತ್ತು ವ್ಯವಸ್ಥಾಪನಾ ಪ್ರಶಿಕ್ಷಕ ಕೇಂದ್ರ** (Faculty Centre for Integrated Rural Development & Management) : ಇದೊಂದು ವಿನೂತನ ಶಿಕ್ಷಣ ಕೇಂದ್ರ. ಇಲ್ಲಿ ಎರಡು ವರ್ಷದ ಸ್ನಾತಕೋತ್ತರ (Post Graduate) ಶಿಕ್ಷಣವನ್ನು ನೀಡಿ ಉತ್ತಮ ಮಟ್ಟದ ಪ್ರಶಿಕ್ಷಕರನ್ನು ತಯಾರು ಮಾಡುತ್ತಾರೆ. ಮುಂದೆ ಇವರು ದೇಶಾದ್ಯಂತ ಸಮಗ್ರ ಗ್ರಾಮೀಣಾಭಿವೃದ್ಧಿ ಮತ್ತು ಬುಡಕಟ್ಟು ಜನಾಂಗ ಅಭಿವೃದ್ಧಿಯಲ್ಲಿ (Tribal Development) ತೊಡಗುವ ಹರಿಕಾರರಾಗುತ್ತಾರೆ. ಈ ಕೇಂದ್ರ ೨೦೦೫ರಲ್ಲಿ ಸ್ಥಾಪಿತವಾದ ರಾಮಕೃಷ್ಣ ಮಿಷನ್ ವಿವೇಕಾನಂದ ವಿಶ್ವವಿದ್ಯಾಲಯದ ಒಂದು ಅಂಗಸಂಸ್ಥೆಯಾಗಿದೆ.

**ಅಂಧ ಮಕ್ಕಳ ಶಾಲೆ** (Blind Boys Academy) : ಇದು ಅಂಧಮಕ್ಕಳಿಗೆ ಶಿಕ್ಷಣ ಕೊಡುವ ವಿಶೇಷ ಸೌಲಭ್ಯವುಳ್ಳ ಶಾಲೆ.

**ಇತರ ಸಂಸ್ಥೆಗಳು :** ಹೆಚ್ಚಿನ ಶಿಕ್ಷಣ ಪಡೆಯಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಆಟೊಮೊಬೈಲ್ ತರಬೇತಿ ಕೇಂದ್ರ (Automobile Training Centre), ಕೃಷಿ ತರಬೇತಿ ಕೇಂದ್ರ (Agriculture Training Center), ಲೋಕ ಶಿಕ್ಷಾ ಪರಿಷದ್ ಮತ್ತು ವಾಣಿಜ್ಯ ಕೇಂದ್ರಗಳಲ್ಲಿ (Commercial Institute) ವೃತ್ತಿಪರ ಶಿಕ್ಷಣ ನೀಡಿ, ಸ್ವ-ಉದ್ಯೋಗ ಮಾಡಿಕೊಳ್ಳಲು ಹಾಗೂ ಉದ್ಯೋಗ ಪಡೆಯುವ ಅರ್ಹತೆಯನ್ನು ಪಡೆಯಲು ಅವಕಾಶಗಳನ್ನು ಕಲ್ಪಿಸಿಕೊಡಲಾಗುತ್ತಿದೆ.

ನರೇಂದ್ರಪುರದ ಆಸುಪಾಸಿನಲ್ಲಿರುವ ಬಡ ವಿದ್ಯಾರ್ಥಿಗಳ ಸಲುವಾಗಿ ಒಂದು ರಾತ್ರಿ ಶಾಲೆ ಕೂಡ ನಡೆಯುತ್ತಿದೆ.

**ವಿಶೇಷತೆ:** ಇಲ್ಲಿನ ವಿದ್ಯಾಸಂಸ್ಥೆಗಳಲ್ಲಿ ಸಂಶೋಧನೆ ಮತ್ತು ಗ್ರಂಥ ಪ್ರಕಟನೆಗಳಿಗೆ ವಿಶೇಷ ಆದ್ಯತೆ ನೀಡಲಾಗಿದೆ. ಸಂಸ್ಕೃತಿ, ಕ್ರೀಡೆ, ದೈಹಿಕ ವ್ಯಾಯಾಮ ಮುಂತಾದ ಪಠ್ಯೇತರ ಚಟುವಟಿಕೆಗಳಿಗೆ ಮುಕ್ತ ಅವಕಾಶಗಳಿವೆ.

ಈ ಸಂಸ್ಥೆಗೆ ಪ್ರತಿಷ್ಠಿತ ಸಂಸ್ಥೆಗಳು, ಸಮಾಜದ ಗಣ್ಯವ್ಯಕ್ತಿಗಳು ಹಾಗೂ ಹಳೆಯ ವಿದ್ಯಾರ್ಥಿಗಳು ಉದಾರವಾಗಿ ದೇಣಿಗೆ ನೀಡಿದ್ದಾರೆ. ಇದರ ಫಲವಾಗಿ, ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನದ ಸವಲತ್ತನ್ನು ಕಲ್ಪಿಸಿಕೊಡಲು ಸಾಧ್ಯವಾಗಿದೆ.

ಈ ಎಲ್ಲಾ ಸಂಸ್ಥೆಗಳಲ್ಲಿ ದಿವ್ಯತ್ರಯರ ಜಯಂತಿ, ಕಲ್ಪತರು ಉತ್ಸವ, ನರನಾರಾಯಣ ಶಿಬಿರ, ರಕ್ತದಾನ ಶಿಬಿರ ಮುಂತಾದ ಉತ್ಸವಗಳು ಮತ್ತು ರಚನಾತ್ಮಕ ಕಾರ್ಯಕ್ರಮಗಳನ್ನು ನಿಯಮಿತವಾಗಿ ಹಮ್ಮಿಕೊಳ್ಳಲಾಗುತ್ತಿದೆ.

ಸ್ವಾಮಿ ವಿವೇಕಾನಂದರ ಮಾನವ ನಿರ್ಮಾಣ ಮತ್ತು ವ್ಯಕ್ತಿತ್ವ ರೂಪಿಸುವ ಸಿದ್ಧಾಂತದ ಸಫಲ ಯತ್ನಗಳು ಮೇಲಿನ ಎಲ್ಲ ಸಂಸ್ಥೆಗಳಲ್ಲಿ ಕ್ರಮಬದ್ಧವಾಗಿ ನಡೆಯುತ್ತಿವೆ.

**ಸಾಮಾಜಿಕ ಕಳಕಳಿ :** ಕೊಳಚೆ ನಿರ್ಮೂಲನ ಮತ್ತು ಪುನರ್ವಸತಿ, ಹರಿಜನರ ಕ್ಷೇಮಾಭಿವೃದ್ಧಿ, ಕೃಷಿ ಸಾಗುವಳಿ, ವೈದ್ಯಕೀಯ ಸವಲತ್ತು, ಗಿಡಮೂಲಿಕೆಗಳ ಉದ್ಯಾನವನ ಮುಂತಾದ ಇನ್ನಿತರ ರಚನಾತ್ಮಕ ಕಾರ್ಯಗಳನ್ನು ಈ ಆಶ್ರಮದ ಅಡಿಯಲ್ಲಿರುವ ಸೇವಾಸಂಸ್ಥೆಗಳು ಜಾರಿಗೆ ತಂದಿವೆ.

**ಉಪಸಂಹಾರ :** ಸುಮಾರು ೨೦೦ ಎಕರೆ ವಿಸ್ತೀರ್ಣದಲ್ಲಿ ಹಲವಾರು ಸಂಸ್ಥೆಗಳು, ೨,೦೦೦ಕ್ಕೂ ಹೆಚ್ಚಿನ ವಿದ್ಯಾರ್ಥಿ ಸಮೂಹ, ಉದ್ಯಾನವನ, ಮಾವಿನ ತೋಪು, ಕೆರೆಗಳಿಂದ ಆವೃತವಾಗಿ ಹರಿದ್ವರ್ಣದಂತೆ ಶೋಭಿಸುವ ನರೇಂದ್ರಪುರ ಆಶ್ರಮವು ಕಣ್ಣಿಗೆ ಮತ್ತು ಮನಸ್ಸಿಗೆ ಮುದ ನೀಡುತ್ತದೆ. ಈ ತಾಣಕ್ಕೆ ಭೇಟಿಕೊಡುವುದೇ ಒಂದು ಆಧ್ಯಾತ್ಮಿಕ ಅನುಭವ.